ಉಮವೀ ಆಡಳಿತದ ನಿರ್ಮಾಣ ಕಲೆ ಮತ್ತು ಕಟ್ಟಡಗಳು

ಉಮವೀ ಕಾಲಘಟ್ಟಕ್ಕೆ ಮುಂಚೆ ಸರಳವಾದ ಕಟ್ಟಡಗಳನ್ನು ನಿರ್ಮಿಸಲಾಗುತ್ತಿತ್ತು. ಉಮವೀ ಕಾಲದಲ್ಲಿ ಇರಾನಿ ಮತ್ತು ರೋಮನ್ ಸಂಸ್ಕೃತಿಗಳೊಂದಿಗೆ ಸಂಪರ್ಕವೇರ್ಪಟ್ಟಿತು. ಆಮೇಲಿನಿಂದ ಭವ್ಯ ಕಟ್ಟಡಗಳ ನಿರ್ಮಾಣದ ಕಡೆಗೆ ಗಮನ ಹರಿಸಲಾಯಿತು. ಸ್ವಾಭಾವಿಕವಾಗಿಯೇ ಈ ವೈಭವದ ಮೊದಲ ದರ್ಶನವು ಭವ್ಯ ಮಸೀದಿಗಳ ನಿರ್ಮಾಣದ ರೂಪದಲ್ಲಾಯಿತು. ಅಮೀರ್ ಮುಆವಿಯಾರ ಕಾಲದಲ್ಲಿ ಕೂಫಾದಲ್ಲಿ ಸೇನೆಯ ಚೌಕಿಯನ್ನು ನಿರ್ಮಿಸಲಾದಾಗ ಅದರ ಮಧ್ಯದಲ್ಲಿ ಒಂದು ಭವ್ಯವಾದ ಮಸೀದಿಯನ್ನು ಕಟ್ಟಲಾಯಿತು. ಉಮವೀ ಕಾಲದ ನಿರ್ಮಾಣಗಳ ವಿವರ ಈ ಕೆಳಗಿನಂತಿವೆ:

ಮಸ್ಜಿದ್ ಕುಬ್ಬತುಸ್ಸಖ್ರಾ: ಅಬ್ದುಲ್ ಮಲಿಕ್‌ರ ಕಾಲದಲ್ಲಿ ಇಸ್ಲಾಮೀ ನಿರ್ಮಾಣ ಕಲೆಯಲ್ಲಿ ಇನ್ನಷ್ಟು ಪ್ರಗತಿಯುಂಟಾಯಿತು. ಕುಬ್ಬತುಸ್ಸಖ್ರಾವು ನಿರ್ಮಾಣ ಕಲೆ ಮತ್ತು ಸೌಂದರ್ಯದ ಮಟ್ಟಿಗೆ ಆ ಕಾಲದ ಅತಿ ಪ್ರಮುಖ ಕಟ್ಟಡಗಳಲ್ಲಿ ಒಂದಾಗಿದೆ. ಸಖ್ರಾ ಎಂಬುದು, ಅಲ್ಲಾಹನ ಸಂದೇಶವಾಹಕರು(ಸ) ಮಿಅ್‌ರಾಜ್‌ನ ರಾತ್ರಿ ಗಗನಯಾನಕ್ಕೆ ಹೊರಡುವಾಗ ಏರಿದ ಬೆಟ್ಟದ ಶಿಖರವಾಗಿದೆ. ಅಬ್ದುಲ್ ಮಲಿಕ್‌ರು ಈ ಸ್ಥಳದಲ್ಲಿ ಗುಂಬಜವನ್ನು ನಿರ್ಮಿಸಿದರು. ಅತ್ಯುತ್ತಮ ಕಲೆಗಾರಿಕೆ, ಸೌಂದರ್ಯ, ಶೃಂಗಾರ ಕಲೆ, ಹರಳು ಕೆತ್ತನೆ, ಆಕರ್ಷಣೆ ಮತ್ತು ದೃಢತೆ ಇತ್ಯಾದಿಗಳ ನಿಟ್ಟಿನಲ್ಲಿ ಇದು ಇಸ್ಲಾಮೀ ನಿರ್ಮಾಣ ಕಲೆಯ ಒಂದು ಭವ್ಯವಾದ ಸಾಧನೆಯಾಗಿದೆ. ಈ ನಿರ್ಮಾಣದಲ್ಲಿ ಕೆಲವು ಕಚ್ಚಾ ವಸ್ತುಗಳು ಮತ್ತು ಅಮೂಲ್ಯ ಹರಳುಗಳನ್ನು ಹಳೆಯ ಪಳೆಯುಳಿಕೆಗಳಿಂದಲೂ ತೆಗೆಯಲಾಗಿತ್ತು. ಒಟ್ಟಿನಲ್ಲಿ ಇಲ್ಲಿಂದ ಇಸ್ಲಾಮೀ ನಿರ್ಮಾಣ ಕಲೆಯ ಒಂದು ನವೀನವಾದ ಕಾಲಘಟ್ಟವು ಪ್ರಾರಂಭವಾಯಿತೆಂದು ತಿಳಿದು ಬರುತ್ತದೆ. ಇದರಲ್ಲಿ ಸುಂದರ ಕೆತ್ತನೆ ಇತ್ಯಾದಿಗಳನ್ನು ವಿಶೇಷವಾಗಿ ಪರಿಗಣಿಸಲಾಗಿತ್ತು.

ತರುವಾಯ ಬಸ್ರಾದ ಮಸೀದಿಗಳ ನವ ನಿರ್ಮಾಣ ಕಾರ್ಯ ಆರಂಭವಾಯಿತು. ಅದಕ್ಕಾಗಿ ತೆಹ್ರಾನಿನ ಇಂಜಿನಿಯರ್‌ಗಳ ಸೇವೆಯನ್ನು ಪಡೆಯಲಾಯಿತು. ಈ ಎರಡೂ ಕಟ್ಟಡಗಳಲ್ಲಿ ತೆಹ್ರಾನಿ ರೀತಿಯ ಕಂಬಗಳನ್ನು ಕಟ್ಟಲಾಗಿತ್ತು. ಅಲ್ಲದೆ ಬಸ್ರಾದ ಮಸೀದಿಯಲ್ಲಿ ಮೊದಲ ಬಾರಿಗೆ ಮಿನಾರವನ್ನು ನಿರ್ಮಿಸಲಾಯಿತು. ಬಳಿಕ ಅದು ಇಸ್ಲಾಮೀ ನಿರ್ಮಾಣ ಕಲೆಯ ವಿಶಿಷ್ಟ ಹೆಗ್ಗುರುತಾಗಿ ಪರಿಗಣಿಸಲ್ಪಡತೊಡಗಿತು. ಅಮೀರ್ ಮುಆವಿಯಾರ ಕಾಲದಲ್ಲಿ ಖಿಝ್ರ್ ಮಹಲ್‌ನ ನಿರ್ಮಾಣದ ಮೂಲಕ ವಾಸದ ಬಂಗಲೆಗಳ ನಿರ್ಮಾಣದ ಹೊಸ ಶೃಂಖಲೆಯು ಆರಂಭವಾಯಿತು.

ಜಾಮಿಅ ಮಸ್ಜಿದ್ ಡಮಸ್ಕಸ್: ಇದು ಇಸ್ಲಾಮೀ ನಿರ್ಮಾಣ ಕಲೆಯ ಭವ್ಯ ಸಾಧನೆಯಾಗಿದೆ. ಇದನ್ನು ವಲೀದ್ ಬಿನ್ ಅಬ್ದುಲ್ ಮಲಿಕ್‌ರವರು ಹಿಜರಿ 88ರಿಂದ 96 ಮಧ್ಯದಲ್ಲಿ ಕಟ್ಟಿಸಿದರು. ಜಾಮಿಅ ಮಸ್ಜಿದ್ ಡಮಸ್ಕಸ್‌ಗೆ ಅಪಾರ ಹಣವನ್ನು ಖರ್ಚು ಮಾಡಲಾಗಿದೆ. ಗೋಡೆಗಳೆಲ್ಲವೂ ಅಮೃತಶಿಲೆ ಮತ್ತು ಹರಳುಗಳ ಗಾರೆಯಿಂದ ಅಲಂಕರಿಸಲ್ಪಟ್ಟಿವೆ. ಈ ಮಸೀದಿಯು ತನ್ನ ಸೌಂದರ್ಯ ಮತ್ತು ಅಲಂಕಾರದ ನಿಟ್ಟಿನಲ್ಲಿ ಒಂದು ಅದ್ಭುತ ಮಾದರಿಯಾಗಿದೆ.

ಉಮವಿಯರ ಮಹಲುಗಳು: ಧಾರ್ಮಿಕ ಕಟ್ಟಡಗಳ ಹೊರತಾಗಿಯೂ ನಿರ್ಮಾಣ ರಂಗದಲ್ಲಿ ಉಮವಿಯರ ಇತರ ಸ್ಮಾರಕಗಳೂ ಇವೆ. ಉದಾಹರಣೆಗೆ: ಅರಮನೆಗಳು. ಇವುಗಳಲ್ಲಿ ರಾಜಮನೆತನದ ಮಂದಿ ವಾಸಿಸುತ್ತಿದ್ದರು. ಇವುಗಳಲ್ಲಿ ಖಿಝ್ರ್ ಮಹಲ್, ಉಮೈರ್ ಮಹಲ್ ಇತ್ಯಾದಿಗಳು ಪ್ರಸಿದ್ಧವಾಗಿವೆ. ಇಂತಹ ಅರಮನೆಗಳ ಪಳೆಯುಳಿಕೆಗಳು ಇಂದಿಗೂ ಕಾಣಸಿಗುತ್ತವೆ.

ಬನೂ ಉಮಯ್ಯ ಖಲೀಫರಲ್ಲಿ ವಲೀದ್ ಬಿನ್ ಅಬ್ದುಲ್ ಮಲಿಕ್‌ರ ಕಾಲವು ನಿರ್ಮಾಣ ಕಲೆಗಳಿಗೆ ಅಪಾರ ಪ್ರಸಿದ್ಧಿಯನ್ನು ಪಡೆದಿದೆ. ಆ ಕಾಲದಲ್ಲಿ ಇತರ ಸಂಸ್ಕೃತಿಗಳೊಂದಿಗೆ ಸಂಪರ್ಕವೂ ಹೆಚ್ಚಾಗಿತ್ತು ಹಾಗೂ ಲೌಕಿಕ ಅಲಂಕಾರವನ್ನು ಸ್ವೀಕರಿಸುವ ಪ್ರಕ್ರಿಯೆ ಪ್ರಾರಂಭವಾಯಿತು. ಅದನ್ನು ಇಸ್ಲಾಮ್ ನಿಷೇಧಿಸಿಲ್ಲ. ಜತೆಗೇ

www.uzaifaani.com

ಮುಸ್ಲಿಮರು ಪಾರತ್ರಿಕ ಅಲಂಕಾರದಿಂದಲೂ ಅಲಕ್ಷ್ಯರಾಗಿರಲಿಲ್ಲ; ಬದಲಾಗಿ ಧಾರ್ಮಿಕ ವಿಷಯಗಳನ್ನೂ ವಿಶೇಷವಾಗಿ ಪಾಲಿಸಿದ್ದಾರೆ.

ಅಬ್ಬಾಸಿ ಕಾಲಘಟ್ಟದ ನಿರ್ಮಾಣ ಕಲೆ ಮತ್ತು ಕಟ್ಟಡಗಳು

ಅಬ್ಬಾಸಿ ಕಾಲದಲ್ಲಿ ವಿವಿಧ ಸಂಸ್ಕೃತಿಗಳೊಂದಿಗೆ ಸಂಪರ್ಕವು ಹೆಚ್ಚಿತು. ಹಾಗಾಗಿ ನಿರ್ಮಾಣ ಮತ್ತು ಅಲಂಕಾರದ ವ್ಯವಸ್ಥೆಯೂ ಹೆಚ್ಚಿತು. ಈ ಕಾಲದಲ್ಲಿ ವಿಶೇಷವಾಗಿ ಬಂಗಲೆಗಳ ನಿರ್ಮಾಣವಾಯಿತು ಮತ್ತು ವಿವಿಧ ನಗರಗಳನ್ನು ನಿರ್ಮಿಸಲಾಯಿತು.

ಬಗ್ದಾದ್‌ನ ನಿರ್ಮಾಣ: ಖಲೀಫಾ ಮನ್ಸೂರ್‌ರವರ ಒಂದು ದೊಡ್ಡ ಸಾಧನೆ ಬಗ್ದಾದ್ ನಗರದ ನಿರ್ಮಾಣವಾಗಿದೆ. ಖುಲಫಾಉರ್ರಾಶಿದೀನ್‌ರ(ರ) ಕಾಲದಲ್ಲಿ ಮದೀನವು ರಾಜಧಾನಿಯಾಗಿತ್ತು. ಉಮವಿ ಕಾಲದಲ್ಲಿ ಡಮಸ್ಕಸ್ ರಾಜಧಾನಿಯಾಯಿತು. ಅಬ್ಬಾಸಿ ಕಾಲದಲ್ಲಿ ಖಲೀಫಾ ಮನ್ಸೂರ್‌ರವರು ರಾಜಧಾನಿಯಾಗಿ ಮಾಡಲು ಟೈಗ್ರಿಸ್ ನದಿಯ ತಟದಲ್ಲಿ ನಗರವನ್ನು ನಿರ್ಮಿಸಿದರು. ಅದು ಬಳಿಕ ಬಗ್ದಾದ್ ಎಂಬ ಹೆಸರಲ್ಲಿ ಪ್ರಸಿದ್ಧಿ ಪಡೆಯಿತು. ಖಲೀಫಾ ಮನ್ಸೂರ್, ಈ ನಗರವನ್ನು ನಿರ್ಮಿಸುವುದಕ್ಕೆ ಮುಂಚೆ ನೆಲದಲ್ಲಿ ಅದರ ನಕ್ಷೆಯನ್ನು ಮಾಡಿಸಿದರು. ಬಗ್ದಾದ್ ನಗರದ ನಕ್ಷೆಯು ವೃತ್ತಾಕಾರದಲ್ಲಿತ್ತು. ಅದರೊಳಗೆ ಪ್ರವೇಶಿಸಲು ನಾಲ್ಕು ಪ್ರಮುಖ ರಸ್ತೆಗಳಿದ್ದುವು. ಈ ನಗರದ ನಿರ್ಮಾಣ ಕಾರ್ಯವು ಹಿಜರಿ 145ರಿಂದ 148ರ ವರೆಗೆ ಜಾರಿಯಲ್ಲಿತ್ತು. ಈ ನಗರದ ಹೊರಗೆ ಎರಡು ದೊಡ್ಡ ಆವರಣ ಗೋಡೆಗಳಿದ್ದುವು. ಒಳಗಿನ ಗೋಡೆಯು ಬಹಳ ಎತ್ತರ ಮತ್ತು ಅಗಲವಾಗಿತ್ತು. ನಗರದ ಹೊರಗಿನ ಆವರಣ ಗೋಡೆಯ ಸುತ್ತಲೂ ಆರು ಮೀಟರ್ ಅಗಲದ ಕಂದಕವನ್ನು ತೋಡಲಾಗಿತ್ತು.

ನಗರದ ಮಧ್ಯದಲ್ಲಿ ಮನ್ಸೂರ್‌ರ ಅರಮನೆಯಿತ್ತು. ಅದನ್ನು ಸ್ವರ್ಣ ಮಹಲೆಂದೂ ಕರೆಯಲಾಗುತ್ತಿತ್ತು. ಅದೊಂದು ಭವ್ಯವಾದ ಅರಮನೆಯಾಗಿತ್ತು. ಅದಕ್ಕಿಂತ ಮುಂಚೆ ಅಂತಹ ಅರಮನೆಯನ್ನು ಮುಸ್ಲಿಮರು ಕಂಡಿರಲಿಲ್ಲ. ಅರಮನೆಯ ಒಂದು ಬದಿಯಲ್ಲಿ ಮಸೀದಿಯಿತ್ತು. ಉಳಿದಂತೆ ಸುತ್ತಲೂ ರಾಜ್ಯಪಾಲರುಗಳ ಮನೆಗಳು ಮತ್ತು ಸರಕಾರಿ ಕಟ್ಟಡಗಳಿದ್ದುವು. ನಾಲ್ಕು ರಾಜಮಾರ್ಗಗಳ ನಡುವೆ ಜನಸಾಮಾನ್ಯರ ಮನೆಗಳಿದ್ದುವು. ನಗರಕ್ಕೆ ಎಂಟು ಪ್ರಧಾನವಾದ ಪ್ರವೇಶ ದ್ವಾರಗಳಿದ್ದುವು.

ಮುಂದೆ ಬಗ್ದಾದ್‌ನಲ್ಲಿ ಆದ ಪ್ರಗತಿಯಿಂದಾಗಿ ಅದು ಜಗತ್ತಿನ ಅತಿ ದೊಡ್ಡ ನಗರವಾಗಿ ಮೂಡಿ ಬಂತು. ಅದರ ಜನಸಂಖ್ಯೆಯು ಇಪ್ಪತ್ತು ಲಕ್ಷವನ್ನೂ ಮೀರಿತು. ಉತ್ಥಾನ ಕಾಲದಲ್ಲಿ ಬಗ್ದಾದ್ ನಗರದಲ್ಲಿ ಹದಿನೇಳು ಸಾವಿರ ಸ್ನಾನಗೃಹಗಳು, ಅದಕ್ಕಿಂತಲೂ ಹೆಚ್ಚು ಮಸೀದಿಗಳು ಮತ್ತು ಹತ್ತು ಸಾವಿರ ರಸ್ತೆಗಳು ಹಾಗೂ ಗಲ್ಲಿಗಳಿದ್ದುವು ಎಂದು ಹೇಳಲಾಗುತ್ತದೆ.

ಸಮರ್ರಾ ನಗರದ ನಿರ್ಮಾಣ: ಇದನ್ನು ಸುರ್ರ ಮನ್ ರಆ (ನೋಡಿದವನು ಮೋಹಿಸುವನು) ಎಂಬ ಹೆಸರಲ್ಲೂ ಕರೆಯಲಾಗುತ್ತಿತ್ತು. ಈ ನಗರವನ್ನು ನಿರ್ಮಿಸುವುದಕ್ಕೆ ಮುಂಚೆ ಇದು ಕ್ರೈಸ್ತರ ಆರಾಧನಾಲಯವಾಗಿತ್ತು. ಇದನ್ನು ಖಲೀಫಾ ಮುಅತ್‌ತಸಿಮ್ ಖರೀದಿಸಿದರು. ಅವರು ಬಗ್ದಾದ್‌ಗೆ ಉತ್ತರ ದಿಕ್ಕಿನಲ್ಲಿ ಸುಮಾರು 75 ಮೈಲು ದೂರ ಟೈಗ್ರಿಸ್ ನದಿಯ ತಟದಲ್ಲಿ ಈ ನಗರವನ್ನು ನಿರ್ಮಿಸಿದರು ಮತ್ತು ಇದನ್ನು ರಾಜಧಾನಿಯನ್ನಾಗಿ ಮಾಡಿದರು. ಈ ನಗರವೂ ಬಹಳ ಪ್ರಗತಿಯನ್ನು ಸಾಧಿಸಿತು ಮತ್ತು ತನ್ನ ಭವ್ಯ ಕಟ್ಟಡಗಳು ಹಾಗೂ ಸೌಂದರ್ಯದಿಂದ ಬಗ್ದಾದ್‌ಗೆ ಸಡ್ಡು ಹೊಡೆಯುವಂತಿತ್ತು.

ಇಸ್ಲಾಮೀ ನಿರ್ಮಾಣ ಕಲೆಯ ಅಧ್ಯಾಯದಲ್ಲಿ ಈ ನಗರಕ್ಕೆ ಬಹಳ ಪ್ರಾಮುಖ್ಯತೆ ಇದೆ. ಏಕೆಂದರೆ ನಿರ್ಮಾಣ ಕಲೆಯು ಆ ಕಾಲದಲ್ಲಿ ಬಹಳ ಉನ್ನತಿಗೇರಿತ್ತು. ನಗರಗಳನ್ನು ಯೋಜನೆಯ ನೀಲನಕ್ಷೆಯ ಆಧಾರದಲ್ಲಿ ನಿರ್ಮಿಸಲಾಗುತ್ತಿತ್ತು. ಸರಳತೆಯ ಜಾಗದಲ್ಲಿ ಅಲಂಕಾರ ಮತ್ತು ರತ್ನ(ಹರಳು)ಗಳ

www.uzurfalahi.com

ಗಾರೆಯು ರಾರಾಜಿಸುತ್ತಿತ್ತು. ಕಟ್ಟಡಗಳ ನಿರ್ಮಾಣದಲ್ಲಿ ದುಂದುವೆಚ್ಚವಾಗ ತೊಡಗಿತು. ಅದಂತೂ ಇಸ್ಲಾಮೀ ಶಿಕ್ಷಣಗಳಿಗೆ ತೀರಾ ವಿರುದ್ಧವಾಗಿತ್ತು.

ಸಮರ್ರದ ಜಾಮಿಅ ಮಸ್ಜಿದ್: ಇದು ಇಸ್ಲಾಮೀ ಜಗತ್ತಿನ ಪುರಾತನ ಮಸೀದಿಗಳ ಪೈಕಿ ಒಂದಾಗಿದೆ. ಇದರ ವಿಸ್ತಾರವು ಈಜಿಪ್ಟಿನ ತೌಲೂನಿ ಮಸೀದಿಗಿಂತ ಒಂದೂವರೆ ಪಟ್ಟು ದೊಡ್ಡದಾಗಿತ್ತು. ಇದರ ನಿರ್ಮಾಣವು ಖಲೀಫಾ ಮುಅ್‌ತಸಿಮ್‌ರ ಕಾಲದಲ್ಲಿ ಆರಂಭವಾಗಿ, ಖಲೀಫಾ ಮುತವಕ್ಕಿಲ್‌ರ ಕಾಲದಲ್ಲಿ ಕೊನೆಗೊಂಡಿತು. ಇದರ ರಚನೆಯು ಆಯತಾಕಾರದಲ್ಲಿದೆ. ಈ ಮಸೀದಿಯ ಉದ್ದ 260 ಮೀಟರ್ ಮತ್ತು ಅಗಲವು 180 ಮೀಟರ್‌ಗಳಷ್ಟಿದೆ. ಏಕಕಾಲಕ್ಕೆ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನರಿಗೆ ಇಲ್ಲಿ ನಮಾಝ್ ನಿರ್ವಹಿಸಲು ಅವಕಾಶವಿತ್ತು. ಈ ಮಸೀದಿಯ ಮಿನಾರವು 75 ಅಡಿ ಎತ್ತರವಾಗಿದ್ದು, ತನ್ನ ಅಪೂರ್ವ ವಿನ್ಯಾಸದಿಂದಾಗಿ ಒಂದು ವಿಶಿಷ್ಟವಾದ ಸ್ಥಾನಮಾನವನ್ನು ಹೊಂದಿದೆ.

ಮದೀನತುಲ್ ಕತಾಯಅ್‌ನ ನಿರ್ಮಾಣ: ಅಹ್ಮದ್ ಬಿನ್ ತೌಲೂನ್, ಸಮರ್ರ ನಗರದ ರೀತಿಯಲ್ಲಿಯೇ ಈಜಿಪ್ಟಿನಲ್ಲಿ ಈ ನಗರವನ್ನು ನಿರ್ಮಿಸಿದನು. ಅಸ್ಕರ್ ನಗರಕ್ಕೆ ಈಶಾನ್ಯ ದಿಕ್ಕಿನಲ್ಲಿ ಒಂದು ವಿಶಾಲವಾದ ಜಾಗವನ್ನು ಅವನು ಆಯ್ದುಕೊಂಡನು. (ಅಸ್ಕರ್ ನಗರವನ್ನು ಅಬ್ಬಾಸಿ ಖಲೀಫರು ಫುಸ್ತಾತ್ ನಗರದ ಸಮೀಪ ನಿರ್ಮಿಸಿದ್ದರು). ಇಬ್ನು ತೌಲೂನ್ ಹಿಜರಿ 256ರಲ್ಲಿ ಒಂದು ಭವ್ಯವಾದ ಅರಮನೆಯನ್ನು ಕಟ್ಟಿಸಿದನು. ಅದರ ಮುಂದೆ ಒಂದು ವಿಶಾಲವಾದ ಮೈದಾನವನ್ನು ರಚಿಸಿದನು. ಆ ಮೈದಾನದಲ್ಲಿ ಆತ ವ್ಯಾಯಾಮ ಮಾಡುತ್ತಿದ್ದನು. ಬಳಿಕ ಅವನು ಜನಸಾಮಾನ್ಯರಿಗಾಗಿ ಮನೆಗಳನ್ನು ನಿರ್ಮಿಸಲು ಅನುಮತಿ ನೀಡಿದನು. ಅದರಿಂದಾಗಿ ಅಸ್ಕರ್ ನಗರ ಮತ್ತು ಫುಸ್ತಾತ್ ನಗರಗಳು ತೀರಾ ಹತ್ತಿರವಾದುವು. ಈ ನಗರಗಳ ನಡುವೆ ಪರ್ವತ ಶ್ರೇಣಿಯಿತ್ತು. ಅದನ್ನು 'ಕೂಹೆ ಲಶ್ಕರ್' ಎಂದು ಹೇಳಲಾಗುತ್ತದೆ. ಇದರಲ್ಲಿಯೇ ಇಬ್ನು ತೌಲೂನನು ದೊಡ್ಡ ಮಸೀದಿಯನ್ನು ನಿರ್ಮಿಸಿದರು. ಈ ನಗರದಲ್ಲಿ ಮಾರುಕಟ್ಟೆಗಳು, ಸ್ನಾನಗೃಹಗಳು ಮತ್ತು ಗಿರಣಿ ಅಂಗಡಿಗಳಿದ್ದುವು. ಇಬ್ನು ತೌಲೂನ್ ಒಂದು ಸೇತುವೆಯನ್ನು ಕಟ್ಟಿಸಿದನು. ಅದನ್ನು 'ಇಮಾಮ್ ಪುಲ್' ಎಂದು ಕರೆಯಲಾಗುತ್ತದೆ.

ಇಬ್ನು ತೌಲೂನ್ ನಿರ್ಮಿಸಿದ ಮಹಲು ನಮ್ಮ ಊಹನೆಗೂ ನಿಲುಕದಂತಹುದಾಗಿತ್ತು. ಅದರ ನಿರ್ಮಾಣದಲ್ಲಿ ಅಪಾರ ಹಣ ವ್ಯಯಿಸಲಾಗಿತ್ತು. ಇಬ್ನು ತೌಲೂನನ ಮರಣಾನಂತರ ಅವರ ಮಗ ಖುಮಾರವಿಯನು ಆ ಮಹಲಿನ ಅಲಂಕಾರದಲ್ಲಿ ಇನ್ನಷ್ಟು ಹಣವನ್ನು ಪೋಲು ಮಾಡಿದನು. ಅದರಿಂದಾಗಿ ಅವನ ಆರ್ಥಿಕ ಸ್ಥಿತಿಯು ತೀರಾ ಹದಗೆಟ್ಟು ಹೋಯಿತು. ಇದುವೇ ಅವನ ಆಡಳಿತವು ಪತನಗೊಳ್ಳಲು ಕಾರಣವಾಯಿತು.

ಮಸ್ಜಿದ್ ಇಬ್ನು ತೌಲೂನ್: ಈ ಮಸೀದಿಯನ್ನು ಇಬ್ನು ತೌಲೂನನು ಕತಾಯಿಅ್ ನಗರದಲ್ಲಿ ನಿರ್ಮಿಸಿದನು. ಅದು ಕೂಹೆ ಲಷ್ಕರ್ ಪರ್ವತ ಶ್ರೇಣಿಯಲ್ಲಿದೆ. ಇಬ್ನು ತೌಲೂನನು ತನ್ನ ಮಹಲಿನ ಮುಂದೆ ಮಾಡಿಸಿದ ಮೈದಾನಕ್ಕೆ ಸಮೀಪ ಈ ಮಸೀದಿ ಇದೆ. ಆದ್ದರಿಂದಲೇ ಆ ಮಸೀದಿಯನ್ನು ಮೈದಾನದ ಮಸೀದಿ ಎಂತಲೂ ಕರೆಯಲಾಗುತ್ತದೆ. ಈ ಮಸೀದಿಯ ಮಧ್ಯಭಾಗದಲ್ಲಿ ತೆರೆದ ಅಂಗಳವಿದೆ.

ಅಬ್ಬಾಸಿಗಳ ಮಹಲುಗಳು: ಅಬ್ಬಾಸಿಗಳು ಬಹಳ ಭವ್ಯವಾದ ಮಹಲುಗಳನ್ನು ಕಟ್ಟಿಸಿದರು. ಉದಾಹರಣೆಗೆ: ಸಾಮ್‌ರ್ರಾದಲ್ಲಿ ಮುಅ್‌ತಸಿಮ್‌ನ ಮಹಲು, ಮಾಮೂನ್‌ನ ಮಹಲು ಇತ್ಯಾದಿ ಇನ್ನೂ ಅನೇಕ ಮಹಲುಗಳಿವೆ.

ಅದೇ ರೀತಿ ಅಬ್ಬಾಸಿ ಕಾಲದಲ್ಲಿ ನಿರ್ಮಾಣ ಕಲೆಯು ಇತರ ಸಂಸ್ಕೃತಿಗಳಿಂದಲೂ ಪ್ರಭಾವಿತಗೊಂಡಿತ್ತು ಎಂದು ನಮಗೆ ತಿಳಿದು ಬರುತ್ತದೆ. ವಿಶೇಷತಃ ವಿನ್ಯಾಸ ಮತ್ತು ಅಲಂಕಾರಗಳಲ್ಲಿ. ಭವ್ಯ ಅರಮನೆಗಳ

www.uzairfahi.com

ನಿರ್ಮಾಣದಲ್ಲಿ ಬಹಳಷ್ಟು ದುಂದುವೆಚ್ಚ ಮಾಡಲಾಗಿತ್ತು. ಅದಂತೂ ಇಸ್ಲಾಮಿನ ಬೋಧನೆಗಳಿಗೆ ತೀರಾ ವಿರುದ್ಧವಾಗಿತ್ತು.

* * * * *

www.uzairfalahi.com